ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಜ್ಞಾನಜ್ಯೋತಿ-ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು- 560 001.
Ph.No.080-22961016 / 22131385 E-Mail ID: registrar@bcu.ac.in

ಸಂಖ್ಯೆ:ಬೆಂ.ನ.ವಿ/ಶೈ.ವಿ/ಎನ್.ಇ.ಪಿ/2024-25 ದಿನಾಂಕ:26.07.2024

## ಸುತ್ತೋಲೆ

ವಿಷಯ: NEP ಪಠ್ಯಕ್ರಮದ ಪ್ರಕಾರ 2021-22, 2022-23, 2023-24ರ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ 4ನೇ ವರ್ಷದ Honors ಹಾಗೂ 5ನೇ ವರ್ಷದ ಸ್ನಾತಕೋತ್ತರ ವ್ಯಾಸಂಗಗಳನ್ನು ಮುಂದುವರೆಸಲು ಆಸಕ್ತಿ ಹೊಂದಿದ ಕಾಲೇಜುಗಳ ಹಾಗೂ ವಿದ್ಯಾರ್ಥಿಗಳ ವಿವರ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 260 ಯುಎನ್ಇ 2019(ಭಾಗ-1) ದಿನಾಂಕ:17.08.2021
2. ಸರ್ಕಾರದ ಆದೇಶ ಸಂಖ್ಯೆ: ಇಡಿ 166 ಯುಎನ್ಇ 2023 ದಿನಾಂಕ:08.05.2024
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:26.07.2024

*****

ಭಾರತ ಸರ್ಕಾರ ಪ್ರಕಟಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯದ ಉನ್ನತ ಶಿಕ್ಷಣ ಇಲಾಖೆಯಡಿಯ ವಿಶ್ವವಿದ್ಯಾಲಯಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ 2021-22ನೇ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಿ ಉಲ್ಲೇಖ(1)ರ ಸರ್ಕಾರದ ಆದೇಶ ಹಾಗೂ ಅದಕ್ಕೆ ಪೂರಕವಾದ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನದ ಮಾರ್ಗಸೂಚಿ ಮತ್ತು ಪ್ರೋಗ್ರಾಮ್ ವಿನ್ಯಾಸ (Course Curriculum)ಗಳ ಪ್ರಕಾರ 2021-22, 2022-23, 2023-24ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಲಾಗಿದ್ದು, ಈ ವಿದ್ಯಾರ್ಥಿಗಳ ಪ್ರಥಮ ತಂಡ 2023-24ರಲ್ಲಿ 3 ವರ್ಷಗಳ ಪದವಿ ವ್ಯಾಸಂಗ ಪೂರ್ಣಗೊಳಿಸಲಿದೆ. ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ NEP-2020 ಶಿಕ್ಷಣ ಕ್ರಮದ ಪ್ರಕಾರ ಪ್ರವೇಶ ಪಡೆದ ಮೇಲೆ ತಿಳಿಸಿದ 3 ತಂಡದ ವಿದ್ಯಾರ್ಥಿಗಳು ಆಪೇಕ್ಷೆಪಟ್ಟಲ್ಲಿ 4ನೇ ವರ್ಷದ Honors ವ್ಯಾಸಂಗ ಮತ್ತು 5ನೇ ವರ್ಷದ ಸ್ನಾತಕೋತ್ತರ ವ್ಯಾಸಂಗಗಳನ್ನು ಸಂಬಂಧಿತ Regulation ಅಥವಾ ಪಠ್ಯಕ್ರಮದ ಪ್ರಕಾರ ಮುಂದುವರೆಸಲು ಅವಕಾಶ ಕಲ್ಪಿಸಲಾಗಿದೆ. ಈ ಕುರಿತು ಸಂಯೋಜಿತ ಮಹಾವಿದ್ಯಾಲಯಗಳಿಗೆ ಕೆಳಕಂಡ ಆಯ್ಕೆಗಳನ್ನು ನೀಡಲಾಗಿದೆ.

1) ಮಹಾವಿದ್ಯಾಲಯಗಳು NEP-2020 ಪರಿನಿಯಮಾವಳಿ ಪಠ್ಯಕ್ರಮದ ಪ್ರಕಾರ 4ನೇ ವರ್ಷದ Honors ಮತ್ತು 5ನೇ ವರ್ಷದ ಸ್ನಾತಕೋತ್ತರ ವ್ಯಾಸಂಗಗಳನ್ನು ನಡೆಸಲು ಇಷ್ಟಪಟ್ಟಲ್ಲಿ ಅವುಗಳನ್ನು ಮುಂದುವರೆಸಿಕೊಂಡು ಹೋಗುವುದು.

ಪು.ತಿ.ನೋ

2) ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ತಾವು ಅಧ್ಯಯನ ಮಾಡಿರುವ ವಿಷಯಗಳಲ್ಲಿ ನಿಯಮಾನುಸಾರ 4ನೇ ವರ್ಷದ Honors ಹಾಗೂ 5ನೇ ವರ್ಷದ ಸ್ನಾತಕೋತ್ತರ ವ್ಯಾಸಂಗ ಮುಂದುವರೆಸಲು ಇಷ್ಟಪಟ್ಟಲ್ಲಿ ಹಾಗೂ ಸದರೀ ಮಹಾವಿದ್ಯಾಲಯವು 4 ಮತ್ತು 5ನೇ ವರ್ಷದ ಕೋರ್ಸುಗಳನ್ನು ಮುಂದುವರೆಸಲು ಆಸಕ್ತಿ ಹೊಂದಿಲ್ಲವಾದಲ್ಲಿ ಅಂತಹ ವಿದ್ಯಾರ್ಥಿಗಳ ಹೆಸರು ನೊಂದಣಿ ಸಂಖ್ಯೆ ಆಯ್ಕೆ ಮಾಡಿಕೊಂಡ ವಿಷಯ ಹಾಗೂ ಅಧ್ಯಯನ ಮುಂದುವರೆಸಲು ಇಷ್ಟಪಡುವ ವಿಷಯದ ವಿವರಗಳನ್ನು ಪಟ್ಟಿ ಮಾಡಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು.

3) ಇಂತಹ ವಿದ್ಯಾರ್ಥಿಗಳ ಅಧ್ಯಯನ ಮುಂದುವರಿಕೆಗೆ ವಿಶ್ವವಿದ್ಯಾನಿಲಯ ಗುರುತಿಸುವ ಮಹಾವಿದ್ಯಾಲಯದಲ್ಲಿ ಆಸಕ್ತ ವಿದ್ಯಾರ್ಥಿಗಳು 4ನೇ ವರ್ಷದ Honors ಮತ್ತು 5ನೇ ವರ್ಷದ ಸ್ನಾತಕೋತ್ತರ ವ್ಯಾಸಂಗಗಳನ್ನು ಮುಂದುವರೆಸಬೇಕಾಗುತ್ತದೆ.

4) ವಿಶ್ವವಿದ್ಯಾನಿಲಯ ಗುರುತಿಸುವ ಮಹಾವಿದ್ಯಾಲಯ 4 ಮತ್ತು 5ನೇ ವರ್ಷದ Honors ಮತ್ತು ಸ್ನಾತಕೋತ್ತರ ವ್ಯಾಸಂಗಗಳಿಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿರುತ್ತದೆ.

ಮೇಲಿನ ಅಂಶಗಳ ಪ್ರಕಾರ 4ನೇ ವರ್ಷದ Honors 5ನೇ ವರ್ಷದ ಸ್ನಾತಕೋತ್ತರ ವ್ಯಾಸಂಗಗಳನ್ನು ನಡೆಸಲು ಸಿದ್ಧವಿರುವ ಕಾಲೇಜುಗಳು ತಮ್ಮ ಸಮ್ಮತಿ ಪತ್ರವನ್ನು ನೀಡಲು ಸೂಚಿಸಲಾಗಿದೆ. ಇದಲ್ಲದೆ ಎಲ್ಲಾ ಮಹಾವಿದ್ಯಾಲಯಗಳ ಪ್ರಾಚಾರ್ಯರು ತಮ್ಮ ಮಹಾವಿದ್ಯಾಲಯಗಳಲ್ಲಿ ಪ್ರವೇಶ ಪಡೆದು ಅಂತಿಮ ಸೆಮಿಸ್ಟರ್‌ನಲ್ಲಿ ಇರುವ ವಿದ್ಯಾರ್ಥಿಗಳು 4ನೇ ವರ್ಷದ Honors ವ್ಯಾಸಂಗ ಮುಂದುವರೆಸಲು ಆಸಕ್ತಿ ಹೊಂದಿದ್ದಲ್ಲಿ ಆ ಕುರಿತು ಅವರಿಂದ ಒಪ್ಪಿಗೆ ಪತ್ರ ಪಡೆದು, ಮೇಲೆ ತಿಳಿಸಿದ ನಮೂನೆಯಲ್ಲಿ ವಿದ್ಯಾರ್ಥಿಗಳ ಪಟ್ಟಿಯನ್ನು ಒಪ್ಪಿಗೆ ಪತ್ರದ ಪ್ರತಿಯೊಂದಿಗೆ ವಿಶ್ವವಿದ್ಯಾನಿಲಯಕ್ಕೆ ದಿನಾಂಕ: 06.08.2024 ರೊಳಗೆ ಸಲ್ಲಿಸಲು ಸೂಚಿಸಲಾಗಿದೆ.

ಕುಲಸಚಿವರು